ಶಾಸಕ ಜಿ.ಡಿ. ಹರೀಶ್ ಗೌಡ ಸಂತಾಪ

ಮೈಸೂರು: ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಹಾಗೂ ಮಾಜಿ ಮೇಯರ್, ಪತ್ರಿಕೋದ್ಯಮಿ ವಾಸು ಅವರ ಪಾರ್ಥಿವ ಶರೀರಕ್ಕೆ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ. ಹರೀಶ್ ಗೌಡ ಅಂತಿಮ ದರ್ಶನ ಪಡೆದು, ಅವರ ಆತ್ಮಕ್ಕೆ ಶಾಂತಿ ಕೋರಿದರು. ನಂತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಪಂಚಭೂತಗಳಲ್ಲಿ ಲೀನವಾದ ಮಾಜಿ ಶಾಸಕ ವಾಸು

ಬನ್ನೂರು ರಸ್ತೆಯಲ್ಲಿರುವ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಆವರಣದಲ್ಲಿ ಅಂತ್ಯಕ್ರಿಯೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರಿಂದ ಅಂತಿಮ ದರ್ಶನ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ಜಿ.ಟಿ. ದೇವೇಗೌಡರಿಂದ ಅಂತಿಮ ನಮನ

ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಂದ ಅಂತಿಮ ದರ್ಶನ.

ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಅವರಿಂದ ಅಂತಿಮ ನಮನ

ಕಾಂಗ್ರೆಸ್ ಭವನದಲ್ಲಿ ನಗರಾಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಅವರು ವಾಸು ಅವರ ಪಾರ್ಥಿವ ಶರೀರದ ಮೇಲೆ ಪಕ್ಷದ ಧ್ವಜ ಹೊದಿಸಿ, ಅಂತಿಮ ನಮನ ಸಲ್ಲಿಸಿದರು.

ವಾಸು ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಗೆ ಪುತ್ರರಾದ ವಿ. ಕವೀಶ್ ಗೌಡ, ವಿ. ಅವೀಶ್ ಗೌಡ ಹಾಗೂ ವಿ. ರಿತೇಶ್ ಗೌಡ ಅವರಿಂದ ಅಂತಿಮ ವಿಧಿವಿಧಾನ ನಡೆಸಿದರು.

ಮೈಸೂರು: ಶನಿವಾರ ಬೆಳಗ್ಗೆ ನಿಧನರಾದ ಮೈಸೂರು ನಗರದ ಮಾಜಿ ಮೇಯರ್ ಹಾಗೂ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು ಅವರ ಅಂತ್ಯಕ್ರಿಯೆಯು ಭಾನು ವಾರ ಮಧ್ಯಾಹ್ನ ಬನ್ನೂರು ರಸ್ತೆಯಲ್ಲಿರುವ ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನೆರವೇರಿತು. ಜಯಲಕ್ಷ್ಮೀಪುರಂನಲ್ಲಿರುವ ಸ್ವಗೃಹದಲ್ಲಿ ವಾಸು ಅವರ ಪಾರ್ಥಿವ ಶರೀರವನ್ನು ಇಟ್ಟು ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಭಾನುವಾರವೂ ಸಾವಿರಾರು ಮಂದಿ ಭೇಟಿ ನೀಡಿ, ಅಂತಿಮ ನಮನ ಸಲ್ಲಿಸಿದರು. ಪ್ರಮುಖವಾಗಿ ಮಾಜಿ ಸಿಎಂ ಎಂ. ವೀರಪ್ಪ ಮೊಯ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ಜಿ.ಟಿ. ದೇವೇಗೌಡ, ವರುಣ ಕ್ಷೇತ್ರದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ,ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ ಮೊದಲಾದವರು ಅಂತಿಮ ದರ್ಶನ ಪಡೆದರು. ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲ ಪುರ ನಾಗೇಂದ್ರ, ಎಂಡಿಎ ಅಧ್ಯಕ್ಷ ಕೆ. ಮರೀಗೌಡ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷ ಮಂಜುಳಾ ಮಾನಸ, ನಂತರ ಪಾರ್ಥಿವ ಶರೀರವನ್ನು ರೈಲ್ವೆ ನಿಲ್ದಾಣದ ಬಳಿ ಇರುವ ಕಾಂಗ್ರೆಸ್ ಭವನಕ್ಕೆ ತರಲಾಯಿತು. ಅಲ್ಲಿ ನಗರಾಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಅವರ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಗೌರವ ಸಲ್ಲಿಸಿದರು. ಪಾರ್ಥಿವ ಶರೀರಕ್ಕೆ ಸೇವಾದಳ ಕಾರ್ಯಕರ್ತರ ಸಹಯೋಗದಲ್ಲಿ ಕಾಂಗ್ರೆಸ್ ಪಕ್ಷದ ಧ್ವಜ ಹೊದಿಸಲಾಯಿತು. ಅಲ್ಲಿಂದ ಪಾರ್ಥಿವ ಶರೀರವನ್ನು ಬನ್ನೂರು ರಸ್ತೆ ಯಲ್ಲಿ ವಾಸು ಅವರೇ ಕಟ್ಟಿ ಬೆಳೆಸಿರುವ ವಿದ್ಯಾವಿಕಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ತರಲಾಯಿತು. ಅದೇ ಜಾಗದಲ್ಲಿ ವಾಸು ಅವರ ಪತ್ನಿ ಲಲಿತಾ ಅವರ ಅಂತ್ಯ ಕ್ರಿಯೆಯನ್ನು ನಡೆಸಲಾಗಿತ್ತು. ಅದರ ಪಕ್ಕದಲ್ಲಿಯೇ ಪುತ್ರರಾದ ವಿ. ಕವೀಶ್ ಗೌಡ, ವಿ. ಅವೀಶ್ ಗೌಡ ಹಾಗೂ ವಿ. ರಿತೇಶ್ ಗೌಡ ಅವರು ಅಂತಿಮ ವಿಧಿವಿಧಾನ ನೇರವೇರಿಸಿದರು. ನಂತರ ಚಿತೆಗೆ ಅಗ್ನಿಸ್ಪರ್ಶ ಮಾಡಲಾಯಿತು. ಅಲ್ಲಿಗೆ ವಾಸು ಅವರು ಪಂಚಭೂತಗಳಲ್ಲಿ ಲೀನವಾದರು.

OMKARA ASSETS RECONSTRUCTION Pvt. Ltd.
ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
CIN: U67100TZ2014PTC020363
ಕಛೇರಿ: 9, ಎಂ.ಪಿ.ನಗರ, 1ನೇ ಸ್ಟ್ರೀಟ್, ಕೊಂಗು ನಗರ್ ಎಕ್ಸ್‌ಟೆನ್ಷನ್, ತಿರುಪುರ್–641607, ದೂ: 04212221144
ಕಾರ್ಪೋರೇಟ್ ಕಛೇರಿ: ಕೊಹಿನೂರ್ ಸ್ಕ್ವೇರ್, 47 ನೇ ಮಹಡಿ, ಎನ್.ಸಿ. ಕೆಳ್ಕರ್ ಮಾರ್ಗ್, ಆರ್.ಜಿ. ಗಡ್ಕರಿ ಚೌಕ್, ದಾದರ್ (ಪಶ್ಚಿಮ), ಮುಂಬೈ – 400028, ದೂ: 022–26544000

ಸ್ಥಿರಾಸ್ತಿಯ ಬಹಿರಂಗ ಹರಾಜು ಮಾರಾಟ ಸೂಚನೆ [ಅನುಬಂಧ–IV-A] [ನಿಯಮ 8(6) ರ ಅಡಿಯಲ್ಲಿ]

ಇ–ಹರಾಜಿನ ದಿನಾಂಕ : 22ನೇ ಏಪ್ರಿಲ್ 2024.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 (ಸರ್ಫೇಸಿ ಕಾಯಿದೆ) ರ ಅಡಿಯಲ್ಲಿ ಬ್ಯಾಂಕಿಗೆ ಅಡಮಾನ ಮಾಡಲಾದ ಸ್ಥಿರಾಸ್ತಿ ಸ್ವತ್ತಿನ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

[illegible] ದಿನಾಂಕ 30.11.2023 ರ [illegible] ಮೆ। ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (OARPL) ಕಂಪನಿಗಳ ಕಾಯಿದೆ, 1956 ರ ನಿಬಂಧನೆಗಳ ಅಡಿಯಲ್ಲಿ ಸಂಘಟಿತವಾದ ಕಂಪನಿಯು [illegible] ಭಾರತೀಯ ರಿಸರ್ವ್ ಬ್ಯಾಂಕ್ (RBI) ನಲ್ಲಿ ನೋಂದಾಯಿಸಲಾಗಿದ್ದು ಅದರ ನೋಂದಾಯಿತ ಕಚೇರಿ : 9, ಎಂ.ಪಿ. ನಗರ, 1ನೇ ಬೀದಿ, ಕೊಂಗು ನಗರ ಬಡಾವಣೆ, ತಿರುಪುರ್ 641607 ಮತ್ತು ಕಾರ್ಪೋರೇಟ್ ಕಚೇರಿ: ಕೊಹಿನೂರ್ ಸ್ಕ್ವೇರ್, 47 ನೇ ಮಹಡಿ, ಎನ್.ಸಿ. ಕೆಳ್ಕರ್ ಮಾರ್ಗ, ಆರ್.ಜಿ. ಗಡ್ಕರಿ ಚೌಕ್, ದಾದರ್ (ಪಶ್ಚಿಮ), ಮುಂಬೈ – 400028, ಇವರು [illegible] "ಓಂಕಾರ ಪಿಎಸ್ 07/2023–24 ಟ್ರಸ್ಟ್" [illegible] "ಎಲ್ಲಿ ಹೇಗಿದೆಯೋ ಹಾಗೆ" "ಏನಿದೆಯೋ ಹಾಗೆ" ಮತ್ತು "ಅಲ್ಲಿ ಏನೇ ಇರಲಿ ಹಾಗೆ" [illegible]

ಸಾಲಗಾರರ &, ಸಹ-ಸಾಲಗಾರರ ಹೆಸರು	ಸ್ಥಿರಾಸ್ತಿಯ ವಿವರ	ಬಾಕಿ ಇರುವ ಮೊತ್ತ	ತಾಗಾದೆ ಸೂಚನೆಯ ದಿನಾಂಕ	ಮೀಸಲು ಬೆಲೆ (ರೂ.)
			ಸ್ವಾಧೀನ ಸೂಚನೆಯ ದಿನಾಂಕ	ಇಎಂಡಿ (ರೂ.)
1) [illegible] (ಸಾಲಗಾರರು) 2) ಶ್ರೀ ಎಂ. ಸೇಕರ್ (ಜಾಮೀನುದಾರರು/ ಅಡಮಾನದಾರರು) 3) ಶ್ರೀಮತಿ. ಎಸ್ ವಿಜಯಲಕ್ಷ್ಮೀ (ಜಾಮೀನುದಾರರು) 4) ಶ್ರೀ ಎಸ್ [illegible] (ಜಾಮೀನುದಾರರು) 5) ಕೆ. [illegible] (ಜಾಮೀನುದಾರರು/ಅಡಮಾನದಾರರು)	[illegible] ಸಂ.12, [illegible] ಸಂ.88, [illegible] ಸರ್ವೆ ಸಂ.1, [illegible] ಸಂ.9 [illegible] 250 [illegible] 250 [illegible] ಸಂ.13, [illegible] ಇದರ ಮಾಲೀಕರು ಎಂ. ಸೇಕರ್.	ರೂ.57,97,51,835.12/– [illegible]	17.04.2018	ರೂ. 35,00,00,000/–
			27.02.2024	ರೂ. 3,50,00,000/–

ಪರಿಶೀಲನೆ ದಿನಾಂಕ & ಸಮಯ : 16.04.2024 ಸಮಯ : 1:00 ರಿಂದ ಸಂಜೆ 4.00 ಗಂಟೆ | ಹರಾಜಿನ ದಿನಾಂಕ & ಸಮಯ : 22.04.2024, ಮಧ್ಯಾಹ್ನ 03.00 ರಿಂದ ಸಂಜೆ 5.00 ಗಂಟೆಗೆ
ಇಎಂಡಿ ಪಾವತಿ ಮತ್ತು ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 20.04.2024, ಸಂಜೆ 06.00 ಗಂಟೆಗೆ. | ಬಿಡ್ ಮೊತ್ತ : ರೂ.25,00,000/–

ನಿಯಮಗಳು ಮತ್ತು ಷರತ್ತುಗಳು: [illegible] "M/s. C1 Inda Pvt. Lid", [illegible] +91–7291981124/25/26, ಇ–ಮೇಲ್ : support@bankeauctions.com ಅಥವಾ ಶ್ರೀ ಭಾವಿಕ್ ಪಾಂಡ್ಯ, ಮೊಬೈಲ್: 88666 82937, ಇ–ಮೇಲ್: mail-maharashtra@c1india.com.
2. [illegible] (ಮೊಬೈಲ್– 85914 39558), ಇ–ಮೇಲ್: ashish.nangia@omkaraarc.com [illegible]
[illegible] http://omkaraarc.com/auction.php [illegible]

ಶಾಸನಬದ್ಧ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 8(6) ನಿಯಮ 9(1)ರ ಅಡಿಯಲ್ಲಿ ಶಾಸನಬದ್ಧ ಮಾರಾಟ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) & 9(1)ರ [illegible] 2002ರ ಅಡಿಯಲ್ಲಿ 30 ದಿನಗಳ ಶಾಸನಬದ್ಧ ಮಾರಾಟ ಸೂಚನೆಯಾಗಿದೆ. [illegible] 2002ರ ನಿಯಮ 8(5) ರ ಪ್ರಕಾರ ಬಾಕಿ ಇರುವ ಮೊತ್ತವನ್ನು ಮರುಪಡೆಯಲು ಆಸ್ತಿ ಹರಾಜು/ಮಾರಾಟ ಮಾಡಲಾಗುತ್ತದೆ.

ದಿನಾಂಕ : 11.03.2024
ಸ್ಥಳ : ಮುಂಬೈ
ಸಹಿ/– ಅಧಿಕೃತ ಅಧಿಕಾರಿ, ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಪರವಾಗಿ
('ಓಂಕಾರ PS07/2023-24 ಟ್ರಸ್ಟ್'ನ ತನ್ನ ಸಾಮರ್ಥ್ಯದಲ್ಲಿ [illegible])

ಡಿಮಾಂಡ್ ನೋಟೀಸ್

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3(1)ರ ಜೊತೆಗೆ [illegible] ಕಲಂ 13(2)ರಡಿ [illegible]

ಸಾಲಗಾರ(ರ)/ ಜಾಮೀನುದಾರ(ರ) ಹೆಸರು	ಡಿಮಾಂಡ್ ನೋಟೀಸಿನ ದಿನಾಂಕ ಮತ್ತು ಮೊತ್ತ	ಭದ್ರತಾ ಆಸ್ತಿಯ ವಿವರ (ಸ್ಥಿರಾಸ್ತಿ)
ಶ್ರೀ ಮಹೇಶ್ ಪಿ.ಎಂ., ಶ್ರೀಮತಿ [illegible] ಪ್ರಾಸ್ಪೆಕ್ಟ್ ಸಂ. 975074	06/03/2024 ₹ 395046.00/- [illegible]	[illegible] ಸಂ. 86/1, [illegible] 152200300201020026, [illegible] ಮೈಸೂರು ಜಿಲ್ಲೆ, ಕರ್ನಾಟಕ, ಭಾರತ- 571601. [illegible] 770.00, 755.00, 566.00. [illegible]
ಶ್ರೀ [illegible], ಶ್ರೀಮತಿ [illegible] [illegible] ಪ್ರಾಸ್ಪೆಕ್ಟ್ ಸಂ. [illegible] 10420031	06/03/2024 ₹ 530756.00/- [illegible]	[illegible] ಸಂ. 135/95, [illegible] 152200300220600145, [illegible] ಮೈಸೂರು, ಕರ್ನಾಟಕ, ಭಾರತ- 571134, [illegible] 1575.00, 1571.00, 1200.00. [illegible]

[illegible]

ಸ್ಥಳ: ಮೈಸೂರು
ದಿನಾಂಕ: 11.03.2024
ಸಹಿ/- ಅಧಿಕೃತ ಅಧಿಕಾರಿ,
[illegible] ಹೋಮ್ ಫೈನಾನ್ಸ್ ಲಿಮಿಟೆಡ್ [illegible] ಪರವಾಗಿ

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ಕರ್ನಾಟಕ ಸರ್ಕಾರ

ಕಾವೇರಿ KAVERI
ಸರಳ • ಸುಸಜ್ಜಿತ • ಸುಧಾರಿತ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಮದುವೆಗಳು ನಿಶ್ಚಯವಾಗಲಿ ಸ್ವರ್ಗದಲ್ಲಿ, ನೋಂದಣಿಯಾಗಲಿ ಕಾವೇರಿ 2.0 ರಲ್ಲಿ, ನಿಮ್ಮ ಮನೆಯಲ್ಲೇ

ನೆಮ್ಮದಿ ಗ್ಯಾರಂಟಿ

ಕಾವೇರಿ 2.0
ಸುಲಭ, ಸರಳ, ಸುಲಲಿತ

- https://kaveri.karnataka.gov.in ಭೇಟಿ ನೀಡಿ ಮತ್ತು ಬಳಕೆದಾರರ ಖಾತೆ ಸೃಜಿಸಿ
- ಕಾವೇರಿ ಪೋರ್ಟಲ್‌ಗೆ ಲಾಗಿನ್ ಮಾಡಿ, ವಿವಾಹ ನೋಂದಣಿ ಸೇವೆ ಆಯ್ಕೆಮಾಡಿ ಮತ್ತು ವಿವರ ನಮೂದಿಸಿ ಅರ್ಜಿ ಸಲ್ಲಿಸಿ
- ಗಂಡ, ಹೆಂಡತಿ ಮತ್ತು ಮೂರು ಸಾಕ್ಷಿದಾರರ ಆಧಾರ್ ದೃಢೀಕರಣ ಪ್ರಕ್ರಿಯೆ ಪೂರ್ಣಗೊಳಿಸಿ
- ನೋಂದಣಾಧಿಕಾರಿಯಿಂದ ಅರ್ಜಿ ಪರಿಶೀಲನೆ, ಆನ್‌ಲೈನ್ ಮೂಲಕ ಶುಲ್ಕ ಸಂದಾಯಕ್ಕೆ ಅವಕಾಶ
- ಕಾವೇರಿ ಪೋರ್ಟಲ್‌ನಲ್ಲಿ ಪ್ರಮಾಣಪತ್ರವನ್ನು ಡೌನ್‌ಲೋಡ್ ಮಾಡಿ

https://kaveri.karnataka.gov.in

ಮಾನ್ಯ ಕಂದಾಯ ಸಚಿವ ಶ್ರೀ ಕೃಷ್ಣ ಬೈರೇಗೌಡರವರು, ಕಾವೇರಿ 2.0 ತಂತ್ರಾಂಶದಲ್ಲಿ ಆನ್‌ಲೈನ್ ವಿವಾಹ ನೋಂದಣಿ ಸೇವೆಗೆ ಚಾಲನೆ ನೀಡುತ್ತಿರುವುದು

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸೇವೆಗಳ ಹೆಚ್ಚಿನ ಮಾಹಿತಿಗಾಗಿ helpdsr@karnataka.gov.in ಇಮೇಲ್ ಮಾಡಿ

ಸಹಾಯವಾಣಿ
080 68265316

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"


ಮೊದಲನೇ ವರ್ಷದ
ಪುಣ್ಯಸ್ಮರಣೆ

ನಮ್ಮ ಪೂಜ್ಯ ತಂದೆಯವರಾದ
ದಿ|| ಆರ್. ಧ್ರುವನಾರಾಯಣ ರವರು
(ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷರು, ಮಾಜಿ ಸಂಸದರು)
ಇವರ ಮೊದಲನೇ ವರ್ಷದ
ಪುಣ್ಯಾರಾಧನೆಯನ್ನು ಏರ್ಪಡಿಸಲಾಗಿದೆ.

ದಿನಾಂಕ : 12-03-2024ರ
ಮಂಗಳವಾರ ಬೆಳಿಗ್ಗೆ : 10.30ಕ್ಕೆ
ಸ್ಥಳ : ಹೆಗ್ಗವಾಡಿ ಗ್ರಾಮ, ಚಾಮರಾಜನಗರ ಜಿಲ್ಲೆ

ತಮ್ಮ ಆಗಮನಾಭಿಲಾಷಿಗಳು
ಶ್ರೀ ದರ್ಶನ್ ಧ್ರುವನಾರಾಯಣ
ಶಾಸಕರು ನಂಜನಗೂಡು ವಿಧಾನಸಭಾ ಕ್ಷೇತ್ರ,
ಶ್ರೀ ಧೀರೇನ್ ಧ್ರುವನಾರಾಯಣ
ಹಾಗೂ ಕುಟುಂಬ ವರ್ಗದವರು

ಸಹಹೃದಯಿ ಬಂಧುಗಳೇ,
ಕೆಪಿಸಿಸಿ ಕಾರ್ಯಾಧ್ಯಕ್ಷರು, ಮಾಜಿ ಸಂಸದರು ಆಗಿದ್ದ ದಿ. ಆರ್. ಧ್ರುವನಾರಾಯಣ್ ಅವರು ದೈಹಿಕವಾಗಿ ನಮ್ಮನ್ನು ಅಗಲಿ ಮಾರ್ಚ್ 11 ಕ್ಕೆ ಒಂದು ವರ್ಷ ಬದುಕಿನಲ್ಲಿ ಸರಳತೆ, ನಡತೆಯಲ್ಲಿ ಸಜ್ಜನಿಕೆ, ಚಿಂತನೆಯಲ್ಲಿ ಸಮಾನತೆಯನ್ನು ಮೈಗೂಡಿಸಿಕೊಂಡ ರಾಜ್ಯ ಕಂಡ ಮಾದರಿ ರಾಜಕಾರಣಿ. ಹಿಂದುಳಿದ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಅಭಿವೃದ್ಧಿಯ ಪರ್ವವನ್ನು ಆರಂಭಿಸಿ ಶಿಕ್ಷಣ, ಆರೋಗ್ಯ, ಕೃಷಿ, ರಸ್ತೆ, ಭವನಗಳು ಹಾಗೂ ಮೂಲಸೌಕರ್ಯಗಳನ್ನು ಒದಗಿಸಿದ 'ಕಾಯಕ ಯೋಗಿ' ಅಕ್ಷರಶಃ ಬುದ್ಧ, ಬಸವ, ಅಂಬೇಡ್ಕರ್ ಹಾದಿಯಲ್ಲಿ ನಡೆದ ಶುದ್ಧ ಹಸ್ತ ಶುದ್ಧ ನುಡಿಯ ಆರ್. ಧ್ರುವನಾರಾಯಣ್ ಅವರು ಎಲ್ಲರನ್ನೂ ಸಮಾನವಾಗಿ ಕಂಡ ಸರ್ವ ಜನಾಂಗದ ನಾಯಕ. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಾಗಿ, ಸಂವಿಧಾನದ ಆಶಯಗಳ ಪರಿಪಾಲಕರಾಗಿ ಜಾತ್ಯಾತೀತ ಸಿದ್ದಂತವನ್ನು ನಂಬಿದ್ದ ಮಾನವತಾವಾದದ ಪ್ರತಿಪಾದಕ. ತಮ್ಮ ಬದುಕಿನಲ್ಲಿ ನೂರಾರು ಕನಸ್ಸುಗಳನ್ನು ಹೊತ್ತು, ಎಲ್ಲರಲ್ಲೂ ನೂರಾರು ಕನಸ್ಸುಗಳನ್ನು ಬಿತ್ತು ಕನಸುಗಳೆಲ್ಲ ನನಸಾಗುವ ಕಾಲದಲ್ಲಿ ಕಣ್ಮರೆಯಾದ 'ಧ್ರುವತಾರೆ' ನಮ್ಮ ಹೃದಯಗಳಿಂದ ಕಾಣೆಯಾಗಲು ಸಾಧ್ಯವಿಲ್ಲ. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಬದುಕಿದ ಆರ್. ಧ್ರುವನಾರಾಯಣ್ ಅವರ ವ್ಯಕ್ತಿತ್ವ, ರಾಜಕೀಯ ನಡೆ ನುಡಿ, ಅಭಿವೃದ್ಧಿಯ ಪರಿಕಲ್ಪನೆ, ದೂರದೃಷ್ಟಿ ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಲಿ. ವರ್ಷದ ಸ್ಮರಣೆಯಲ್ಲಿ ಎಲ್ಲರೂ ಭಾಗಿಯಾಗೋಣ ಬನ್ನಿ.